ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿರುಗುಪ್ಪ

ಕ್ರಿಮಿನಲ್ ಸಂಖ್ಯೆ 622/2019

**ಪಿರ್ಯಾದಿಃ ಎಂ.ಬಿ.ಕ್ರಿಷ್ಣ ರಾವ್**

-ವಿರುದ್ಧ-

ಆರೋಪಿತರು :

ಎ1 ಪ್ರಕಾಶ್ ರಾವ್ ಎ. ತಂದೆ ವೆಂಕೋಬ್ ರಾವ್ ಎ.
ವಃ 64 ವರ್ಷ, ವಾಸಃ ಸಿರುಗುಪ್ಪ ಟೌನ್, ಸಿರುಗುಪ್ಪ.

ಎ2 ರಾಮು ತಂದೆ ರಾಮರಾಜು,
ವಃ 61 ವರ್ಷ, ವಾಸಃ ಅನ್ನಪೂರ್ಣ ಲೇಔಟ್, ಬಳ್ಳಾರಿ.

<u>ದೋಷಾರೋಪಣೆ</u>

ನಾನು ಹಾಜಿಹುಸೇನಸಾಬ ಯಾದವಾಡ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ ಸಿ ನ್ಯಾಯಾಲಯ ಸಿರುಗುಪ್ಪ ಈ ಮೂಲಕ ನಿಮ್ಮ ಮೇಲೆ ಹೊರೆಸುವ ಆರೋಪಣೆ ಏನೆಂದರೆ ಃ

ಪಿರ್ಯಾದಿ/ಎಂ.ಬಿ.ಕ್ರಿಷ್ಣ ರಾವ್ ಸಂಗಡ ಆರೋಪಿ-1/ಎಂ.ಪ್ರಕಾಶ್ ರವರು 01.04.2015 ರಂದು ಮಾಡಿದ ಅಗ್ರಿಮೆಂಟ್ ಪ್ರಕಾರ ತಮ್ಮ ಪಾಲುದಾರಿಕೆ ಹಣವನ್ನು ಪಡೆದು ಈ ಬಗ್ಗೆ ರಸೀದಿಗಳನ್ನು ಸಹ ಕೊಟ್ಟು ಕ್ರಿಷ್ಣ ಗ್ಯಾಸ್ ಏಜೆನ್ಸಿಯ ಲೇವಾದೇವಿಯ ಎಲ್ಲಾ ವ್ಯವಹಾರ ಸಿರುಗುಪ್ಪದ ಎಸ್ ಬಿ ಐ ಬ್ಯಾಂಕಿನಲ್ಲಿ ನಡೆಯುತ್ತಿದ್ದರಿಂದ ಪಿರ್ಯಾದಿ ಮತ್ತು ಆರೋಪಿ ಪ್ರಕಾಶ್ ರಾವ್ ಇವರ ಜಾಯಿಂಟ್ ಅಕೌಂಟ್ ಸದರಿ ಬ್ಯಾಂಕಿನಲ್ಲಿದ್ದು, ಮೂಲ ಮಾಲೀಕ ಎಂ ಬಿ ಕ್ರಿಷ್ಣರಾವ್ ಮತ್ತು 2 ನೇ ಪಾಲುದಾರ ಆರೋಪಿ-1 ಪ್ರಕಾಶ್ ರಾವ್ ಹಳೇ ಪಾಲುದಾರಿಕೆ ಪಡಿಚಯದ ಮೇಲೆ ಆಗಾಗ್ಗೆ ಕ್ರಿಷ್ಣ ಗ್ಯಾಸ್ ಏಜೆನ್ಸಿ ಅಂಗಡಿಗೆ ಹೋಗುತ್ತಾ ಅಂಗಡಿಯಲ್ಲಿದ್ದ ಚೆಕ್ ಪುಸ್ತಕದಿಂದ 4 ಚೆಕ್ಕುಗಳನ್ನು ಕಳುವು ಮಾಡಿಕೊಂಡು ಹೋಗಿದ್ದು , ಆ ಮೂಲಕ ಭಾ.ದಂ.ಸಂ.ಕಲಂ.379 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಅದೇ ರೀತಿ ಮೇಲೆ ಹೇಳಿದ ದಿವಸ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ದಿನಾಂಕ 09.12.2015 ರಂದು ಚೆಕ್ ನಂ.235413 ರಲ್ಲಿ ಸಹಿ ಮಾಡಿ ರೂ.25,000/- ಗಳನ್ನು ತುಂಬಿ ಚಾಸಾ-4/ಬಸವರಾಜ್ ಮೂಲಕ ಬ್ಯಾಂಕಿಗೆ ಕಳುಹಿಸಿ ಚೆಕ್ ಡ್ರಾ ಮಾಡಿಸಿ ಹಣ ಪಡೆದಿದ್ದು, ಅದೇ ರೀತಿ ದಿನಾಂಕ 18-01-2016 ರಂದು ಚೆಕ್ ನಂ.235419 ರಲ್ಲಿ ಸಹಿ ಮಾಡಿ ರೂ.30,000/- ನ್ನು ತುಂಬಿ, ಚಾಸಾ-4/ಬಸವರಾಜ್ ಮೂಲಕ ಬ್ಯಾಂಕಿಗೆ ಕಳುಹಿಸಿ ಚೆಕ್ ಡ್ರಾ

ಮಾಡಿ ಹಣ ಪಡೆದಿದ್ದು, ಅದೇ ರೀತಿ 11-01-2016 ರಂದು ಚೆಕ್ ನಂ.235418 ರಲ್ಲಿ ಸಹಿ ಮಾಡಿ ರೂ.40,000/- ನ್ನು ತುಂಬಿ ಚಾಸಾ-5/ಪ್ರಸಾದ್ ರವರ ಮೂಲಕ ಬ್ಯಾಂಕಿಗೆ ಕಳುಹಿಸಿ ಹಣ ಡ್ರಾ ಮಾಡಿ ಹಣ ಪಡೆದು, ಅಲ್ಲದೆ ದಿನಾಂಕ 19-12-2015 ರಂದು ಚೆಕ್ ನಂ.235415 ನೇದ್ದಕ್ಕೆ ಸಹಿ ಮಾಡಿ ಚೆಕ್ಕಿನಲ್ಲಿ ರೂ.70,000/- ನ್ನು ತುಂಬಿ ಚಾಸಾ-6/ದೇವರಾಜ್ ಗೌಡ ರವರ ಮೂಲಕ ಬ್ಯಾಂಕಿಗೆ ಕಳುಹಿಸಿ ಹಣ ಡ್ರಾ ಮಾಡಿ ಹಣ ಪಡೆದು, 4 ಚೆಕ್ಕುಗಳಿಗೆ ಸಹಿ ಮಾಡಿ ತನ್ನ ಪರಿಚಯಸ್ಥರ ಮೂಲಕ 4 ಚೆಕ್ಕುಗಳಿಂದ ಒಟ್ಟು ರೂ.1,65,000/- ಹಣವನ್ನು ಪಡೆದು ಪಿರ್ಯಾದಿಗೆ ನಂಬಿಕೆ, ದ್ರೋಹ ಮತ್ತು ಮೋಸ ಮಾಡಿರುತ್ತೀರಿ. ಆದ್ದರಿಂದ ನೀವು ಕಲಂ ಭಾ.ದಂ.ಸಂ.ಕಲಂ.406, 408 ರಡಿಯಲ್ಲಿ ಶಿಕ್ಷಾರ್ಹ ಅಪರಾದವನ್ನು ಮಾಡಿರುತ್ತೀರಿ.

ಅದೇ ರೀತಿ ಮೇಲೆ ಹೇಳಿದ ದಿವಸ, ವೇಳೆ ಮತ್ತು ಸ್ಥಳದಲ್ಲಿ ಆರೋಪಿ-2 ರವರಾದ ನೀವು ದಿನಾಂಕ 14-10-2015 ರಂದು ಪಿರ್ಯಾದಿ ಸಮೇತಾ ಆರೋಪಿ-1 ಪ್ರಕಾಶ್ ರಾವ್ ಬ್ಯಾಂಕಿಗೆ ಕೊಟ್ಟ ಪತ್ರವನ್ನು ಆರೋಪಿ-2/ರಾಮು ಆರ್. ಅಸಿಸ್ಟೆಂಟ್ ಮ್ಯಾನೇಜರ್ ರವರು ಪಡೆದು ಜಾಯಿಂಟ್ ಅಕೌಂಟ್ ರಲ್ಲಿಯ ಪ್ರಕಾಶ್ ರಾವ್ ಇವರ ಸಹಿಯನ್ನು ರದ್ದುಗೊಳಿಸದೆ, ಸದರಿ ದಿವಸ ಮಾಸಿಕ ಸಭೆಗೆ ಹೋದ ಚಾಸಾ-8/ಶ್ರೀ ಎಸ್.ಕೆ.ವಿಠಲರಾವ್ ರವರಿಗೆ ಮಾಹಿತಿ ನೀಡದೆ ನಿರ್ಲಕ್ಷತನ ತೋರಿಸಿದ್ದು, ಆದ್ದರಿಂದ ನೀವು ಕಲಂ ಭಾ.ದಂ.ಸಂ.ಕಲಂ. 420 ರಡಿಯಲ್ಲಿ ಶಿಕ್ಷಾರ್ಹ ಅಪರಾದವನ್ನು ಮಾಡಿರುತ್ತೀರಿ.

**ದಿನಾಂಕಃ** 15.09.2023. **ಪ್ರ.ದ.ನ್ಯಾ.ದಂ., ಸಿರುಗುಪ್ಪ.**

ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿರುಗುಪ್ಪ

ಕ್ರಿಮಿನಲ್ ಸಂಖ್ಯೆ 622/2019

**ಪಿರ್ಯಾದಿಃ ಎಂ.ಬಿ.ಕ್ರಿಷ್ಣ ರಾವ್**

-ವಿರುದ್ಧ–

ಆರೋಪಿತರು ಃ

**ಎ1 ಪ್ರಕಾಶ್ ರಾವ್ ಎ. ತಂದೆ ವೆಂಕೋಬ್ ರಾವ್ ಎ.**
**ವಃ 64 ವರ್ಷ, ವಾಸಃ ಸಿರುಗುಪ್ಪ ಟೌನ್, ಸಿರುಗುಪ್ಪ.**

**ದೋಷಾರೋಪಣೆ**

ಪ್ರಶ್ನೆ ಃ ಇದೀಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೇ?
ಉತ್ತರಃ

ಪ್ರಶ್ನೆ ಃ ನೀವು ತಪ್ಪೊಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ಪರ ಪ್ರತಿರಕ್ಷಣೆ ಏನಾದರೂ ಇದೆಯೇ? ವಿಚಾರಣೆ ಆಗಬೇಕೇ?

ಉತ್ತರಃ

(ಮೇಲಿನ ಆರೋಪಿತರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಸದ್ರಿ ಆರೋಪಿತರಿಂದ ಪಡೆದಿದ್ದು ಅದು ಸತ್ಯಾಂಶವನ್ನು ಹೊಂದಿದೆಯೆಂದು ಪ್ರಮಾಣೀಕರಿಸ ಲಾಗಿದೆ).

**ದಿನಾಂಕಃ** 15.09.2023. **ಪ್ರ.ದ.ನ್ಯಾ.ದಂ.,ಸಿರುಗುಪ್ಪ.**

ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿರುಗುಪ್ಪ

ಕ್ರಿಮಿನಲ್ ಸಂಖ್ಯೆ 622/2019

**ಪಿರ್ಯಾದಿಃ ಎಂ.ಬಿ.ಕ್ರಿಷ್ಣ ರಾವ್**

-ವಿರುದ್ಧ-

ಆರೋಪಿತರು :

**ಎ2 ರಾಮು ತಂದೆ ರಾಮರಾಜು,**
**ವಃ 61 ವರ್ಷ, ವಾಸಃ ಅನ್ನಪೂರ್ಣ ಲೇಔಟ್, ಬಳ್ಳಾರಿ.**

**ದೋಷಾರೋಪಣೆ**

ಪ್ರಶ್ನೆ ಃ ಇದೀಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೇ?
ಉತ್ತರಃ

ಪ್ರಶ್ನೆ ಃ ನೀವು ತಪ್ಪೊಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ಪರ ಪ್ರತಿರಕ್ಷಣೆ ಏನಾದರೂ ಇದೆಯೇ? ವಿಚಾರಣೆ ಆಗಬೇಕೇ?

ಉತ್ತರಃ

**(ಮೇಲಿನ ಆರೋಪಿತರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಸದ್ರಿ ಆರೋಪಿತರಿಂದ ಪಡೆದಿದ್ದು ಅದು ಸತ್ಯಾಂಶವನ್ನು ಹೊಂದಿದೆಯೆಂದು ಪ್ರಮಾಣೀಕರಿಸಲಾಗಿದೆ).**

**ದಿನಾಂಕಃ** 15.09.2023. **ಪ್ರ.ದ.ನ್ಯಾ.ದಂ.,ಸಿರುಗುಪ್ಪ.**